### ರೋಗದ ಲಕ್ಷಣಗಳು

ಬಾಯಿಯೊಳಗೆ ಈ ಶಿಲೀಂಧ್ರ ಸೋಂಕು ಇದ್ದಲ್ಲಿ ಬೆಳ್ಳಗಿನ ದಪ್ಪವಾದ ಬಿಳಿ ಪದರ ನಾಲಗೆ ಮೇಲೆ ಹೆಚ್ಚಾಗಿ ಕಂಡುಬರುತ್ತದೆ. ಬಾಯಿಯ ಇತರ ಭಾಗಗಳಾದ ವಸಡು ಅಂಗಳ ಮತ್ತು ಕೆನ್ನೆಯ ಒಳಭಾಗದಲ್ಲೂ ಕಂಡುಬರುತ್ತದೆ. ಬಾಯಿಯಲ್ಲಿ ವಾಸನೆ, ಉರಿಯೂತ ನೋವು ಮತ್ತು ತುರಿಕೆ ಕೂಡ ಇರುವ ಸಾಧ್ಯತೆ ಇದೆ. ಕ್ಯಾಂಡಿಡಾ ಆಲ್ಬಿಕನ್ ಎಂಬ ಶಿಲೀಂಧ್ರ ಹೆಚ್ಚಾಗಿ ಬಾಯಿಯಲ್ಲಿ ಮತ್ತು ಕ್ಯಾಂಡಿಡಾ ಫಂಗಸ್ ಎಂಬ ಶಿಲೀಂಧ್ರ ಚರ್ಮದಲ್ಲಿ ಸೋಂಕು ಉಂಟು ಮಾಡುತ್ತದೆ. ಈ ಎರಡೂ ನಿರುಪದ್ರವಿ ಜೀವಿಗಳು ನಮ್ಮ ದೇಹದ ಇತರ ಆರೋಗ್ಯವಂತ ನಿರುಪದ್ರವಿ ಬ್ಯಾಕ್ಟೀರಿಯಾ ಜೊತೆಗೆ ಬಾಳ್ವೆ ನಡೆಸುತ್ತಿರುತ್ತದೆ. ಆದರೆ ದೇಹದ ರಕ್ಷಣಾ ವ್ಯವಸ್ಥೆ ಕುಂದಿದಾಗ, ಅತಿಯಾದ ಆ್ಯಂಟಿ ಬಯೊಟಿಕ್ ಸೇವನೆ, ಅತಿಯಾದ ರಸದೂತಗಳ ಬಳಕೆಯಿಂದಾಗಿ, ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ನಡುವಿನ ಸಮತೋಲನ ಕಳೆದು ಹೋಗುತ್ತದೆ. ಆಗ ಈ ಶಿಲೀಂಧ್ರಗಳು ಅನಿಯಂತ್ರಿತವಾಗಿ ಬೆಳೆದುಕೊಂಡು, ತನ್ನ



ಸಂಖ್ಯೆಯನ್ನು ವೇಗವಾಗಿ ವೃದ್ಧಿಸಿ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಈ ಸಂದರ್ಭದಲ್ಲಿ ವೈದ್ಯರು ತಕ್ಷಣವೇ ಗುರುತಿಸಿ ಸೂಕ್ತ ಚಿಕಿತ್ಸೆ ಸಕಾಲದಲ್ಲಿ ನೀಡಿದಲ್ಲಿ ಶಿಲೀಂಧ್ರ ಸೋಂಕನ್ನು ನಿಯಂತ್ರಿಸಬಹುದು. ಇಲ್ಲವಾದಲ್ಲಿ ಈ ಶಿಲೀಂಧ್ರಗಳು ರಕ್ತಕ್ಕೆ ಸೇರಿಕೊಂಡು, ರಕ್ತದಲ್ಲಿ ಸೋಂಕು ಉಂಟು ಮಾಡಿ ದೇಹದ ಇತರ ಭಾಗಗಳಿಗೂ ಹರಡಿ ಬಹು ಅಂಗಾಂಗ ವೈಫಲ್ಯಕ್ಕೂ ಕಾರಣವಾಗುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದ ತಕ್ಷಣವೇ ಗುರುತಿಸಿ, ಒಳರೋಗಿಯಾಗಿ ದಾಖಲು ಮಾಡಿ ಸೂಕ್ತ ಚಿಕಿತ್ಸೆ ನೀಡಬೇಕಾದ ಅನಿವಾರ್ಯತೆ ಇದೆ.

ಬಾಯಿಯೊಳಗೆ ಅಷ್ಟೇ ಅಲ್ಲದೆ ಚರ್ಮ ಕೆಂಪಗಾಗಿ ಊದಿಕೊಳ್ಳುವುದು, ನಂತರ ಗುಳ್ಳೆಗಳು ಕಂಡುಬರುವುದು. ಚರ್ಮದಲ್ಲಿ ತುರಿಕೆ, ನೋವು ಮತ್ತು ಉರಿಯೂತ, ಬೆರಳುಗಳ ಸಂಧಿಯಲ್ಲಿ, ಉಗುರಿನ ಸುತ್ತ ಬೆಳ್ಳಗಿನ ಬಿಳಿಯಾದ ಪದರ ಉಂಟಾಗುವುದು, ಜನನಾಂಗದ ಸುತ್ತಲೂ ಈ ಶಿಲೀಂಧ್ರ ಸೋಂಕು ಆಕ್ರಮಿಸುವ ಸಾಧ್ಯತೆ ಇದೆ. ಇದರಿಂದ ಅಸಹ್ಯವಾದ ವಾಸನೆ ಮತ್ತು ಉರಿ ಬರಬಹುದು.

ರೋಗಿಯ ರೋಗದ ಚರಿತ್ರೆಯನ್ನು, ಔಷಧಿಗಳ ಚರಿತ್ರೆಯನ್ನು ವೈದ್ಯರು ಕೂಲಂಕಷವಾಗಿ ಪರಿಶೀಲಿಸಿ, ರೋಗದ ಲಕ್ಷಣಗಳನ್ನು ಅಭ್ಯಸಿಸಿ ರೋಗ ನಿರ್ಣಯ ಮಾಡುತ್ತಾರೆ. ಯಾವುದೇ ವಿಶೇಷ ರೀತಿಯ ಪರೀಕ್ಷೆ ಅಗತ್ಯವಿರುವುದಿಲ್ಲ. ಅಗತ್ಯವಿದ್ದಲ್ಲಿ ರಕ್ತ ಪರೀಕ್ಷೆ ಮಾಡಿ ಬಿಳಿ ರಕ್ತಕಣಗಳ ಸಂಖ್ಯೆಯನ್ನು ಪರಿಶೀಲಿಸಿ ರೋಗ ಪತ್ತೆ ಹಚ್ಚಬಹುದು.

### ಚಿಕಿತ್ಸೆ ಹೇಗೆ?

ಈ ಸೋಂಕು ಚಿಕಿತ್ಸೆಗೆ ಚೆನ್ನಾಗಿ ಸ್ಪಂದಿಸುತ್ತದೆ. ಸೋಂಕಿನ ತೀವ್ರತೆಯನ್ನು ಮತ್ತು ರೋಗದ ಲಕ್ಷಣಗಳ ತೀವ್ರತೆಯನ್ನು ಪರಿಗಣಿಸಿ ರೋಗಿಯನ್ನು ಒಳರೋಗಿಯಾಗಿ ದಾಖಲಿಸಿ, ಆ್ಯಂಟಿ ಫಂಗಲ್ ಅಂದರೆ ಶಿಲೀಂಧ್ರ ನಿವಾರಕ ಔಷಧಿಗಳನ್ನು ರಕ್ತನಾಳಗಳ ಮುಖಾಂತರ ನೀಡಿದಲ್ಲಿ ಈ ಸೋಂಕನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಿದೆ. ಇದೇ ರೀತಿ ಕಾಯಿಲೆಗೆ ಕಾರಣವಾದ ಅಂಶಗಳ ಬಗ್ಗೆ ನಿಗಾ ವಹಿಸಿ ಅದಕ್ಕೂ ಸೂಕ್ತ ಚಿಕಿತ್ಸೆ ನೀಡಬಹುದು. ಅನಿಯಂತ್ರಿತ ಮಧುಮೇಹ ಇದ್ದಲ್ಲಿ ಅದನ್ನೂ ನಿಯಂತ್ರಿಸಬೇಕು. ಜೊತೆಗೆ ಜ್ವರ, ನೋವಿನ ಔಷಧಿಗಳನ್ನು ಮತ್ತು ದೇಹಕ್ಕೆ ಅಗತ್ಯವಾದ ವಿಟಮಿನ್ ಮತ್ತು ಖನಿಜಾಂಶಗಳನ್ನು ರಕ್ತನಾಳಗಳ ಮುಖಾಂತರ ನೀಡಿ ರೋಗಿ ಬೇಗ ಚೇತರಿಸಿಕೊಳ್ಳುವಂತೆ ಮಾಡಲಾಗುತ್ತದೆ.

ದೇಹದ ರಕ್ಷಣಾ ವ್ಯವಸ್ಥೆಯನ್ನು ಹೆಚ್ಚು ಬಲಿಷ್ಠವಾಗಿಸಲು ಪೂರಕವಾದ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ದೇಹದ ಪ್ರತಿರೋಧಕ ಶಕ್ತಿ ಹೆಚ್ಚಿದಾಗ ಶಿಲೀಂಧ್ರಗಳ ಸೋಂಕನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಿದೆ. ಕ್ಯಾಂಡಿಡಿಯೋಸಿಸ್ ಎಂಬ ಅವಕಾಶವಾದಿ ಸೋಂಕು ಅಷ್ಟೇನೂ ಅಪಾಯಕಾರಿಯಾದ ರೋಗ ಅಲ್ಲದಿದ್ದರೂ, ಅವಕಾಶ ಸಿಕ್ಕಿದಾಗಲೆಲ್ಲಾ ತಾನು ಜೀವಿಸುವ ಮತ್ತು ವಾಸಿಸುವ ವ್ಯಕ್ತಿಗೆ ಕಾಡುವ ಮನೆಮುರುಕ ಕೆಲಸವನ್ನು ಮಾಡುತ್ತದೆ. ತಕ್ಷಣವೇ ಗುರುತಿಸಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡಿದಲ್ಲಿ ಸಂಪೂರ್ಣವಾಗಿ ಗುಣಮುಖವಾಗುವ ಸಾಧ್ಯತೆ ಇದೆ. ಆದರೆ ನಿರ್ಲಕ್ಷ್ಯವಹಿಸಿ ಸ್ವಯಂ ಮದ್ದು ಮಾಡಿದರೆ ಮಾರಣಾಂತಿಕವಾಗಿ ಕಾಡುವ ಅಪಾಯವೂ ಇದೆ. ಈ ಕಾರಣದಿಂದ ನಿರ್ಲಕ್ಷ್ಯ ಮಾಡದೆ ತಕ್ಷಣವೇ ತನ್ನ ವೈದ್ಯರ ಸಲಹೆ ಪಡೆಯುವುದು ಸೂಕ್ತ.



## ಹಲ್ಲು ಮೂಡುವ ಸಮಯ

ನವಜಾತ ಶಿಶುವಿನ ಬಾಯಿಯಲ್ಲಿ ಹಲ್ಲು ಇರುವುದಿಲ್ಲ. ಮಗು ಹುಟ್ಟಿದ ಆರರಿಂದ ಏಳನೇ ತಿಂಗಳಿನಿಂದ ಹಾಲು ಹಲ್ಲು ಮೂಡಲು ಶುರುವಾಗುತ್ತದೆ. ಮೊದಲು ಕೆಳಗಿನ ದವಡೆಯ ಬಾಚಿ ಹಲ್ಲು, ಬಳಿಕ ಮೇಲಿನ ದವಡೆಯ ಬಾಚಿಹಲ್ಲು, ಕೋರೆಹಲ್ಲು, ಕೊನೆಗೆ ದವಡೆ ಹಲ್ಲುಗಳು ಮೂಡುತ್ತವೆ. ಮೂರು ವರ್ಷದ ಹೊತ್ತಿಗೆ ಎಲ್ಲಾ ಹಾಲುಹಲ್ಲುಗಳು ಮಗುವಿನ ಬಾಯಿಯಲ್ಲಿ ಹುಟ್ಟಿರುತ್ತವೆ. ಹಾಲುಹಲ್ಲುಗಳ ಒಟ್ಟು ಸಂಖ್ಯೆ ಇಪ್ಪತ್ತು. ಮಗುವಿನ ಒಸಡನ್ನು ಬೇಧಿಸಿ ಹಲ್ಲು ಮೂಡುವ ಪ್ರಕ್ರಿಯೆ ಮಗುವಿನ ಬೆಳವಣಿಗೆಯ ಒಂದು ಪ್ರಮುಖವಾದ ಹಂತ.

ಮಗುವಿನ ಬಾಯಿಯಲ್ಲಿ ಹಲ್ಲು ಮೂಡುವ ಸಮಯವೂ ಮಗುವಿನಿಂದ ಮಗುವಿಗೆ ವ್ಯತ್ಯಾಸವಿರುತ್ತದೆ. ನಿಗದಿತ ಸಮಯಕ್ಕಿಂತಲೂ ಆರು ತಿಂಗಳು ತಡವಾದರೆ ತಜ್ಞ ದಂತ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳಬೇಕು. ಒಂದು ವರ್ಷವಾದರೂ ಹಲ್ಲು ಮೂಡದಿದ್ದಲ್ಲಿ ಅದನ್ನು ನ್ಯೂನತೆ ಎಂದೇ ಭಾವಿಸಬೇಕು. ಆನುವಂಶೀಯತೆ, ಕೌಟುಂಬಿಕ ಕಾರಣಗಳು, ಅಪೌಷ್ಟಿಕತೆ, ಕ್ಯಾಲ್ಸಿಯಂ ಕೊರತೆ, ವಿಟಮಿನ್ ಮತ್ತು ಖನಿಜಾಂಶಗಳ ಕೊರತೆ, ರಸದೂತಗಳ ಕೊರತೆ ಮುಂತಾದ ಕಾರಣಗಳೇ ಹಲ್ಲು ಹುಟ್ಟಲು ತಡವಾಗುವುದು. ಬುದ್ಧಿಮಾಂದ್ಯ ಮಕ್ಕಳು, ಡೌನ್ ಸಿಂಡ್ರೋಮ್, ಅವಧಿಗೆ ಮುನ್ನ ಜನಿಸಿದ ಮಕ್ಕಳು, ಹುಟ್ಟಿನ ಸಮಯದ ಸಮಸ್ಯೆಗಳಿಂದಲೂ ಹಾಲು ಹಲ್ಲು ಹುಟ್ಟಲು ತಡವಾಗಬಹುದು.

ಮಕ್ಕಳಿಗೆ ಸರಿಯಾದ ಪ್ರಮಾಣದಲ್ಲಿ ಕ್ಯಾಲ್ಸಿಯಂ ಮತ್ತು ಖನಿಜಾಂಶಗಳು ದೊರಕುವಂತೆ ಮಾಡಿದಲ್ಲಿ, ಪೌಷ್ಟಿಕ ಆಹಾರ ದೊರತಲ್ಲಿ ಸಕಾಲದಲ್ಲಿ ಹಲ್ಲು ಮೂಡಬಹುದು. ಮೆದುಳಿನ ಕಾಯಿಲೆ ಇದ್ದಲ್ಲಿ ಸೂಕ್ತ ವೈದ್ಯರ ಸಲಹೆ ಅಗತ್ಯ. ಒಟ್ಟಿನಲ್ಲಿ ಮೂರು ವರ್ಷಕ್ಕೆ ಎಲ್ಲಾ ಹಾಲುಹಲ್ಲುಗಳು ಹುಟ್ಟಿ ಹನ್ನೆರಡು ವರ್ಷದ ಹೊತ್ತಿಗೆ ಎಲ್ಲಾ ಹಾಲುಹಲ್ಲುಗಳು ಬಿದ್ದುಹೋಗಿ ಶಾಶ್ವತ ಹಲ್ಲುಗಳು ಹುಟ್ಟುತ್ತವೆ. ಮಗುವಿಗೆ ಹತ್ತು ವರ್ಷವಾದಾಗ ಹತ್ತು ಹಾಲುಹಲ್ಲುಗಳು ಬಿದ್ದುಹೋಗಿ ಹತ್ತು ಶಾಶ್ವತ ಹಲ್ಲುಗಳು ಬರದಿದ್ದಲ್ಲಿ ಅದನ್ನು ಅಸಹಜ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. ಮಗುವಿಗೆ ಹಲ್ಲು ಮೂಡುವ ಸಮಯದಿಂದ ಮನೆಯಲ್ಲಿ ಸಂಭ್ರಮವೇ.